ಶ್ರೀ ಎಂ. ವೀರಪ್ಪ ಮೊಯಿಲಿ.— ಎ. ಪಿ. ಎಂ. ಸಿ. ಗಳಿಗೆ ನಾಮಿನೇಷನ್ ಮಾಡಿದ ಮೇಲೆ ಅದು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಪರಿಣಾಮವನ್ನುಂಟು ಮಾಡಿದೆ. ನಾಮಿನೇಷನ್ ಮಾಡುವಾಗ ತಾವು ಯಾವ ಆಧಾರವನ್ನು ಇಟ್ಟುಕೊಂಡು ಮಾಡಿದ್ದೀರಿ? ಬರೇ ಜನತಾಪಕ್ಷ ಭಾರತೀಯ ಜನತಾಪಕ್ಷ ಮತ್ತು ನಿಮಗೆ ಸಹಕಾರ ಕೊಡತಕ್ಕಂಥ ಪಕ್ಷಗಳನ್ನು ಇಟ್ಟುಕೊಂಡು ಇದನ್ನು ಮಾಡಿದ್ದೀರಿ ಎಂದು ನಾನು ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಆರ್. ಎಲ್. ಜಾಲಪ್ಪ.— ನಾಮಿನೇಷನ್ ಮಾಡಿದ ಮೇಲೆ ಅದು ಎಷ್ಟರ ಮಟ್ಟಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯ ಮೇಲೆ ಪರಿಣಾಮ ಬೀರಿದೆ ಎನ್ನುವುದು ನನಗೆ ಗೊತ್ತಿಲ್ಲ ಎರಡನೆಯದಾಗಿ, ಯಾವ ಆಧಾರದ ಮೇಲೆ ಮಾಡಿದ್ದೀರಿ ಎಂದು ಕೇಳಿದ್ದಾರೆ. ಇದು ರಾಜಕೀಯ ನಿರ್ಧಾರಗಳನ್ನು ಅವಲಂಬಿಸಿರುತ್ತದೆ. ಎಂದು ಹೇಳಬಯಸುತ್ತೇನೆ. ಆಳುವ ಪಕ್ಷದವರನ್ನು ಹಾಕಿದ ಹಾಗೆಯೇ ಅಲ್ಲಲ್ಲಿ ವಿರೋಧ ಪಕ್ಷದವರನ್ನೂ ನಾಮಿನೇಟ್ ಮಾಡಿದ್ದೇವೆ. ಹಿಂದಿನ ಸರ್ಕಾರದವರೂ ಇದನ್ನು ಮಾಡುತ್ತಿದ್ದರು, ನಾವು ಇನ್ನೂ ಸ್ವಲ್ಪ ಲಿಬರಲ್ ಆಗಿ ಇದನ್ನು ಮಾಡಿದ್ದೇವೆ.

ಶ್ರೀ ಬಿ. ಸ್ವಾಮಿರಾವ್.— ನಾವು ಶಾಸಕರು ಸೂಚಿಸಿದ ಪಟ್ಟಿ ಎಲ್ಲಿ ಹೋಯಿತು?

ಶ್ರೀ ಆರ್. ಎಲ್. ಜಾಲಪ್ಪ.— ಆ ಪಟ್ಟಿಯನ್ನು ಭದ್ರವಾಗಿ ಇಟ್ಟಿದ್ದೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ನಾಮಿನೇಷನ್ ಮಾಡುವಾಗ ವಿರೋಧ ಪಕ್ಷದವರಿಗೂ ಕೂಡ ಪ್ರಾತಿನಿಧ್ಯ ಕೊಡಬೇಕೆಂದು ನಾವು ಅನೇಕ ಅವಕಾಶಗಳನ್ನು ವಿರೋಧ ಪಕ್ಷದವರಿಗೆ ಕೊಟ್ಟಿದ್ದೆವು ಆದೇ ರೀತಿ ನೀವೂ ಕೂಡ ಒಂದು ಹೆಜ್ಜೆ ಮುಂದೆ ಹೋಗಿ ವಿರೋಧಪಕ್ಷದವರ ವಿಶ್ವಾಸ ತೆಗೆದುಕೊಂಡರೆ ಎ. ಪಿ ಎಂ. ಸಿ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಬಹುದಿಲ್ಲವೆ?

ಅಧ್ಯಕ್ಷರು.— ಇದು ಒಳ್ಳೆಯ ಸಲಹೆ.

ಶ್ರೀ ಆರ್. ಎಲ್. ಜಾಲಪ್ಪ.— ಕೆಲವು ಕಡೆಗಳಲ್ಲಿ ವಿರೋಧ ಪಕ್ಷಕ್ಕೆ ಸೇರಿದವರನೂ ಕೂಡ ನಾಮಿನೇಟ್ ಮಾಡಿದ್ದೇವೆ.

ರಾಜ್ಯದಲ್ಲಿ ಪಾರ್ಥೇನಿಯಂವನ್ನು ನಿರ್ಮೂಲನ ಮಾಡುವುದು.

ಪ್ರ. ೮೮ (೮೪) ಶ್ರೀ ಪಿ. ರಾಮಚಂದ್ರರಾವ್ (ಉಲ್ಲಾಳ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಸರ್ಕಾರದವರು ಪಾರ್ಥೇನಿಯಂ ನಿರ್ಮೂಲನಕ್ಕಾಗಿ ಇಡೀ ರಾಜ್ಯದಲ್ಲಿ ಮತ್ತು ಬೆಂಗಳೂರು ನಗರದಲ್ಲಿ ಪ್ರತ್ಯೇಕ ಕಾರ್ಪೊರೇಷನ್‌ಗಳ ಮೂಲಕ ಮತ್ತು ಸರ್ಕಾರದ ವತಿಯಿಂದ ಖರ್ಚು ಮಾಡಿದ ಹಣವೆಷ್ಟು ?

ಆ) ಈ ನಿರ್ಮೂಲನೆ ನಿಜವಾಗಿಯೂ ಆಗಿದೆಯೇ ; ಹಾಗಿದ್ದಲ್ಲಿ ಎಷ್ಟು ಪ್ರದೇಶದಲ್ಲಿ ಈ ನಿರ್ಮೂಲನೆಯಾಗಿದೆ ?

ಇ) ಪಾರ್ಥೇನಿಯಂ ನಿರ್ಮೂಲನಕ್ಕಾಗಿ ಸರ್ಕಾರದವರು ಹಾಕಿಕೊಂಡಿರುವ ಯೋಜನೆಗಳೇನು ಮತ್ತು ಈ ಬಗ್ಗೆ ಮಿಾಸಲಿರಿಸಿರುವ ಹಣವೆಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು). —

ಅ) ಸರ್ಕಾರದ ವತಿಯಿಂದ ಹಣ ಖರ್ಚು ಮಾಡಿಲ್ಲ. ಕೆಳಕಂಡ ಮಹಾ ನಗರಸಭೆಗಳು ವಿವರಿಸಿದಂತೆ ಹಣ ಖರ್ಚು ಮಾಡಿದ್ದಾರೆ.

೧)	ಬೆಂಗಳೂರು	ರೂ. ೨,೩೪,೧೯೬-೯೩
೨)	ಹುಬ್ಬಳ್ಳಿ-ಧಾರವಾಡ	ರೂ. ೪,೫೦೦-೦೦
೩)	ಬೆಳಗಾವಿ	ರೂ. ೮,೩೯೨-೨೦

ಅ) ಸಂಪೂರ್ಣ ನಿರ್ಮೂಲನೆಯಾಗಿರುವುದಿಲ್ಲ.

ಇ) ಪ್ರತ್ಯೇಕ ಯೋಜನೆ ಇರುವುದಿಲ್ಲ ಮತ್ತು ಹೆಚ್ಚು ಹಣ ವಿನಿಯೋಗಿಸಲಾಗಿಟ್ಟಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್ (ಶ್ರೀ ಪಿ. ರಾಮಚಂದ್ರರಾವ್ ಅವರ ಪರವಾಗಿ).—ಸ್ವಾಮಿ, ಫಾರ್ಥೆನಿಯಂನಿಂದಾಗಿ ಬೆಂಗಳೂರು ನಗರದ ನಾಗರಿಕರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದರೆ ಬೆಂಗಳೂರು ನಗರ ಕಾರ್ಪೊರೇಷನ್‌ನವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎಂ. ಚಂದ್ರಶೇಖರ್.—ಇದು ಒಂದು ಅಭಿಪ್ರಾಯ ಅಷ್ಟೆ. ಆದರೆ ಇದು ಪೂರ್ತಿಯಾಗಿ ರುಜುವಾತು ಆಗಿಲ್ಲ. ಈ ಫಾರ್ಥೆನಿಯಂ ಕಾರ್ಪೊರೇಷನ್ ಪ್ರದೇಶದಲ್ಲಿ ಮಾತ್ರವಲ್ಲದೆ ಖಾಸಗಿ ಪ್ರದೇಶಗಳಲ್ಲೂ ಕೂಡ ಬೆಳೆದು ನಿಂತಿದೆ. ಇದರ ನಿರ್ಮೂಲನ ಕಾರ್ಯಕ್ರಮವನ್ನು ವ್ಯಾಪಕವಾದ ರೀತಿಯಲ್ಲಿ ಮಾಡಿದರೆ ಮಾತ್ರ ಅದು ಪರಿಣಾಮ ಬೀರುತ್ತದೆಯೇ ಹೊರತು ಸಣ್ಣ ಪ್ರಮಾಣದಲ್ಲಿ ಆದರೆ ಫಲಪ್ರದವಾಗುವುದಿಲ್ಲ. ಈ ಕಡೆಗೆ ಕಾರ್ಪೊರೇಷನ್ನಿನ ಜೊತೆಗೆ ಜನತೆಯೂ ಕೂಡ ಮನಸ್ಸು ಮಾಡಿ ಪ್ರಯತ್ನ ಮಾಡಬೇಕು. ಬೆಂಗಳೂರು ನಗರದ ಶಾಸಕರೂ ಕೂಡ ಇದರ ಕಡೆಗೆ ಗಮನಹರಿಸಿ ಪ್ರಯತ್ನ ಪಡಬೇಕು.

ಶ್ರೀ ಎಸ್. ಸೂರ್ಯನಾರಾಯಣರಾವ್.—ಇದಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ?

ಶ್ರೀ ಎಂ. ಚಂದ್ರಶೇಖರ್.—ಕಾರ್ಪೊರೇಷನ್ ಒಂದೇ ಇದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿಲ್ಲ. ಎಲ್ಲರೂ ಸೇರಿ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಫಾರ್ಥೆನಿಯಂ ಮೇಲೆ ಉಪ್ಪು ನೀರನ್ನು ಸಿಂಪಡಿಸುವುದರಿಂದ ಅದು ನಿರ್ಮೂಲನವಾಗುತ್ತದೆ ಎಂದು ಕೃಷಿ ವಿಶ್ವವಿದ್ಯಾನಿಲಯದವರು ಅಭಿಪ್ರಾಯಪಟ್ಟಿದ್ದಾರೆ. ಆದರಂತೆ ಏಕೆ ಪ್ರಯತ್ನಿಸಬಾರದು ?

ಶ್ರೀ ಎಂ. ಚಂದ್ರಶೇಖರ್.—ಈ ಪ್ರಯತ್ನ ಕೂಡ ನಡೆದಿದೆ. ಆದರೆ ಸಂಪೂರ್ಣವಾಗಿ ಫಾರ್ಥೆನಿಯಂ ಅನ್ನು ತೆಗೆಯುವುದಕ್ಕೆ ಸಾಧ್ಯವಾಗಿಲ್ಲ. ಆದರೂ ಕೂಡ ನಾವು ಪ್ರಯತ್ನ ಮಾಡಬಹುದು.

ಶ್ರೀ ಹನುಮಂತರಾವ್ ದೇಸಾಯಿ.—ಸ್ವಾಮಿ, ಫಾರ್ಥೇನಿಯಂ ಎನ್ನುವುದು ಇಂಗ್ಲೀಷ್ ಶಬ್ದ. ಇದಕ್ಕೆ ಕನ್ನಡದಲ್ಲಿ ಏನೆಂದು ಕರೆಯುತ್ತಾರೆ ?

ಅಧ್ಯಕ್ಷರು.—ಇದರ ಬಗ್ಗೆ ನೀವು ಶ್ರೀ ಜಿ. ನಾರಾಯಣಕುಮಾರ್ ಅವರನ್ನು ಕೇಳಬಹುದು.

ಶ್ರೀ ಎಂ. ಚಂದ್ರಶೇಖರ್.—ಇದಕ್ಕೆ ಕಾಂಗ್ರೆಸ್ ಹುಲ್ಲು ಅಂತ ಒಂದು ರೂಢಿನಾಮ ಇದೆ.

ಹನುಮಂತರಾವ್ ದೇಸಾಯಿ.—ಸ್ವಾಮಿ, ಕಾಂಗ್ರೆಸ್ ಹುಲ್ಲನ್ನು ಸಂಪೂರ್ಣವಾಗಿ ನಿರ್ಮೂಲ ಮಾಡುವುದಕ್ಕೆ ಇನ್ನು ಎಷ್ಟು ಕಾಲಾವಕಾಶ ಬೇಕು ?

ಶ್ರೀ ಗೋವಿಂದ ಪಿ. ವಡೆಯರಾಜ್.—ಅದನ್ನು ಜನತಾಹುಲ್ಲು ಎಂದು ಕರೆಯಿರಿ ಸ್ವಾಮಿ.

ಒಬ್ಬ ಮಾನ್ಯಸದಸ್ಯರು.—ಹಿಂದಿನಿಂದಲೂ ಸಹ ಅದನ್ನು ಕಾಂಗ್ರೆಸ್ ಹುಲ್ಲು ಎಂದು ಕರೆದಿದ್ದಾರಲ್ಲಾ ಸ್ವಾಮಿ ?

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನನ್ನ ಅಭಿಪ್ರಾಯ ಹೇಳುವುದಾದರೆ ಅದಕ್ಕೆ ಜನತಾ ಹುಲ್ಲು ಎಂದು ಹೆಸರು ಇಟ್ಟರೆ ಯೋಗ್ಯ ಎಂದು ನನಗೆ ಅನಿಸುತ್ತದೆ.

ಅಧ್ಯಕ್ಷರು.—ಈಗ ಹೆಚ್ಚು ಸಮಯ ಇಲ್ಲ, ಮಧ್ಯೆ ಮಧ್ಯೆ ಹೀಗೆ ಕೇಳುತ್ತಾ ಹೋದರೆ ಪ್ರಶ್ನೋತ್ತರಗಳನ್ನು ಮುಂಗಿಸುವುದಕ್ಕೆ ಕಷ್ಟವಾಗುತ್ತದೆ. ಮಾನ್ಯಸದಸ್ಯರು ಏನು ಕೇಳುತ್ತಾರೋ ಅದನ್ನು ಕೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಹನುಮಂತ ರಾವ್ ದೇಸಾಯ್.—ಸ್ವಾಮಿ ನಾನು ಮೊದಲೇ ಹೇಳಿದ ಹಾಗೆ ಈ ಕಾಂಗ್ರೆಸ್ ಹುಲ್ಲನ್ನು ನಾಶ ಮಾಡುವುದಕ್ಕೆ ಇನ್ನು ಎಷ್ಟು ಕಾಲಾವಕಾಶ ಬೇಕಾಗುತ್ತದೆ ಸ್ವಾಮಿ ?

ಶ್ರೀ ಎಂ. ಚಂದ್ರಶೇಖರ್.—ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಬೆಂಗಳೂರು ನಗರಸಭೆಯ ವ್ಯಾಪ್ತಿಯನ್ನು ವಿಸ್ತರಿಸುವುದು

*೮೫. ಶ್ರೀ ಎಸ್ ಸೂರ್ಯನಾರಾಯಣರಾವ್(ವರ್ತೂರು).–ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬೆಂಗಳೂರಿನ ಕೃಷ್ಣರಾಜಪುರ ಪ್ರದೇಶದಲ್ಲಿ ಕಾರ್ಪೊರೇಷನ್ ಪ್ರದೇಶಕ್ಕೆ ಸೇರಿಸಿಕೊಳ್ಳಬೇಕೆಂದಿರುವ ಹಳ್ಳಿಗಳು ಯಾವುವು ?

ಆ) ಈ ಬಗ್ಗೆ ಹೈಕೋರ್ಟಿನಿಂದ ತಡೆಯಾಜ್ಞೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ

ಇ) ಹಾಗಿದ್ದರೆ ಇದನ್ನು ತೆರವು ಮಾಡಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ.ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು) :—

ಅ) ಕೃಷ್ಣ ರಾಜಪುರದ (ಹೊಬಳಿ) ಕೆಳಕಂಡ ಹಳ್ಳಿಗಳನ್ನು ಬೆಂಗಳೂರು ಮಹಾನಗರ ಸಭೆಗೆ ಸೇರಿಸಿಕೊಳ್ಳಲು ತೀರ್ಮಾನಿಸಲಾಗಿತ್ತು.

೧. ಬೈಯಪ್ಪನಹಳ್ಳಿ
೨. ಬಿನ್ನಿಗನಹಳ್ಳಿ
೩. ನಾಗಾವಾರಪಾಳ್ಯ (ಎಚ್)
೪. ನಾಗಯ್ಯನಪಾಳ್ಯ (ಎಚ್)
೫. ಬಿನ್ನಮಂಗಲ ಎಂ. ಕಾವಲ್
೬. ಶ್ರೀನಿವಾಸಪುರ
೭. ಬಾಣಸವಾಡಿ
೮. ಸುಬ್ಬಯ್ಯನಪಾಳ್ಯ (ಎಚ್)
೯. ಚಿಕ್ಕಬಾಣಸವಾಡಿ (ಎಚ್)
೧೦. ಚಳ್ಳಕೆರೆ.
೧೧. ಬ್ಯಾಟರಾಯನಪುರ
೧೨. ವಿಜಿನಪುರ
೧೩. ವಂಹಾದೇವಪುರ

ಆ) ಬಂದಿದೆ.

ಇ) ಮೇಲೆ ಸೂಚಿಸಿದ ಹಳ್ಳಿಗಳನ್ನು ಬೆಂಗಳೂರು ನಗರಸಭೆಗೆ ಸೇರಿಸಿ ಕೊಳ್ಳುವ ಉದ್ದೇಶವನ್ನು ಕೈಬಿಡಲಾಗಿದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಮಂತ್ರಿಗಳು ಬೆಂಗಳೂರಿನ ಕೃಷ್ಣರಾಜಪುರ ಪ್ರದೇಶದಲ್ಲಿ ಕಾರ್ಪೊರೇಷನ್ ಪ್ರದೇಶಕ್ಕೆ ಸೇರಿಸಿಕೊಳ್ಳಬೇಕೆಂದಿರುವ ಹಳ್ಳಿಗಳ ಹೆಸರನ್ನು ಹೇಳಿದರು, ಆದರೆ ನಾನು ಕೇಳುವುದೇನೆಂದರೆ, ಕೃಷ್ಣರಾಜಪುರ ಮತ್ತು ರಾಮಮೂರ್ತಿ ನಗರ ಇವೇನು ಇದೆ ಇವೆಲ್ಲಾ ಸೇರಿಸಿ ಒಂದು ನೋಟಿಫೈಡ್ ಏರಿಯಾ ಅಂತ ಮಾಡಿದ್ದೀರಿ. ಅದರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ? ಮತ್ತು ಇದರ ಬಗ್ಗೆ ಹೈಕೋರ್ಟ್‌ನಲ್ಲಿ ತಡೆ ಆಜ್ಞೆ ಏನು ಇದೆ ಅದನ್ನು ತೆಗೆಸುವುದಕ್ಕೆ ತಾವು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ನಾನು ಮೊದಲೇ ಹೇಳಿದ ಹಾಗೆ ಕೃಷ್ಣರಾಜಪುರದ ಹೋಬಳಿಗೆ ಸೇರಿದ ೧೩ ಹಳ್ಳಿಗಳನ್ನು ಕಾರ್ಪೊರೇಷನ್‌ಗೆ ಸೇರಿಸಿಕೊಳ್ಳಬೇಕೆನ್ನುವ ತೀರ್ಮಾನವನ್ನು ಈಗಾಗಲೇ ತೆಗೆದುಕೊಂಡಿದೆ. ಆದರೆ ತಾವು ಹೇಳಿದ ಹಾಗೆ ಅಲ್ಲಿ ನೋಟಿಫೈಡ್ ಏರಿಯಾ ಕೆಲವು ಇವೆ. ಕೆ. ಹಳ್ಳಿ, ಶೀಗೇಹಳ್ಳಿ, ಎಸ್.ಟಿ. ಹಳ್ಳಿ, ದೇವಸಂದ್ರ ಹೀಗೆ ೧೦ ಗ್ರಾಮಗಳು ಕೃಷ್ಣರಾಜಪುರದ ಪಂಚಾಯಿತಿಗೆ ಸೇರಿರುವುದರಿಂದ ಅದು ೧೯೭೯ ರಿಂದಲೂ ಕೂಡ ನೋಟಿಫೈಡ್ ಏರಿಯಾ ಆಗಿಯೇ ಉಳಿದುಕೊಂಡಿದೆ. ಇನ್ನೊಂದು ವಿಷಯ ಏನೆಂದರೆ, ಹೆಚ್. ಎ. ಎಲ್. ಸ್ಯಾನಿಟರಿ ಬೋರ್ಡ್ ಏರಿಯಾದಲ್ಲಿ ನೋಟಿಫೈಡ್